ಶ್ರೀ ಎಸ್.ಬಿ. ನಗರಾಳ್.—ಈ ಸಂಬಂಧದಲ್ಲಿ ಸರ್ಕಾರ ಒಂದು ಕಮಿಟಿಯನ್ನು ನೇಮಕ ಮಾಡಿದ್ದು ಅವರು ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಅದರಂತೆ ೫೦೦ ಎಕರೆ ಇರತಕ್ಕೆ ವಿಭಾಗಕ್ಕೆ ಒಬ್ಬ ನೀರಗಂಟಿ ಕೆಲಸ ಮಾಡುತ್ತಿದ್ದರೆ ಅಳ್ಳಿಯದಾಗುತ್ತದೆ ಎಂದು ಹೇಳಿದ್ದಾರೆ. ಅದರಂತೆ ಮೂರು ಸಾವಿರ ನೀರಗಂಟಿಗಳನ್ನು ನೇಮಕ ಮಾಡಬೇಕಾಗುತ್ತದೆ. ಅದಕ್ಕೆ ಸುಮಾರು ೬೭ ಲಕ್ಷ ರೂಪಾಯಿ ಹಣ ಬೇಕಾಗುತ್ತದೆ. ಈಗಿನ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಸರಕಾರ ಆಲೋಚನೆ ಮಾಡಿ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಹಂಜಿ ಶಿವಣ್ಣ.—ನೀರಗಂಟಿಗಳನ್ನು ನೇಮಿಸದೆ ಇರುವುದರಿಂದ ಕೆರೆಗಳಲ್ಲಿನ ನೀರು ವ್ಯರ್ಥವಾಗಿ ಹರಿಯದೆ ಹೆಚ್ಚು ಪೋಲಾಗಿ ಅನ್ಯಾಯವಾಗುತ್ತಿದೆ. ಆದಷ್ಟು ಜಾಗ್ರತೆ ನೀರಗಂಟಿಗಳನ್ನು ನೇಮಿಸಿ ನೀರನ್ನು ಕ್ರಮವಾಗಿ ಉಪಯೋಗಿಸುವ ವ್ಯವಸ್ಥೆಯನ್ನು ಮಾಡುತ್ತಾರೆಯೇ ?

ಶ್ರೀ ಎಸ್.ಬಿ. ನಗರಾಳ್.—ಅದನ್ನು ಆಲೋಚನೆ ಮಾಡುತ್ತಿದ್ದೇವೆನ್ನುವ ವಿಷಯವನ್ನು ಈಗಾಗಲೇ ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ.—ತೋಟಿ, ತಳವಾರ ಮತ್ತು ನೀರಗಂಟಿ ಇವರು ವಿಲೇಜ್ ಆಫೀಸರ್ಸ್. ಈ ಹುದ್ದೆಗಳು ಈಗ ರದ್ದು ಆಗಿವೆ. ಆದುದರಿಂದ ನೀರಗಂಟಿಗಳು ರದ್ದು ಆಗಿದ್ದಾರೆಯೋ ಇಲ್ಲವೋ ?

ಶ್ರೀ ಎಸ್.ಬಿ. ನಗರಾಳ್.—ಈಗ ಇರುವ ನೀರಗಂಟಿಗಳ ಸಂಖ್ಯೆ ೫೫ ಎಂದು ಹೇಳಿದ್ದೇನೆ. ಮುಂದೆ ಯಾವ ರೀತಿಯಿಂದ ಮಾಡಬೇಕು ಎನ್ನುವ ದೃಷ್ಟಿಯಿಂದ ಕಮಿಟಿ ರಿಪೋರ್ಟ್ ಬಂದಿದೆ. ೫೦೦ ಎಕರೆ ಇರುವ ವಿಭಾಗಕ್ಕೆ ಒಬ್ಬ ನೀರಗಂಟಿ ಇದ್ದರೆ ಸುವ್ಯವಸ್ಥಿತ ರೀತಿಯಲ್ಲಿ ಕೆಲಸ ನಡೆಯುತ್ತದೆ ಎನ್ನುವ ಶಿಫಾರಸು ಮಾಡಿದ್ದಾರೆ ಅದನ್ನು ಸರಕಾರ ಪರ್ಯಾಲೋಚನೆ ಮಾಡುತ್ತಿದೆ. ಅದಕ್ಕೆ ೬೭ ಲಕ್ಷ ರೂಪಾಯಿ ಖರ್ಚಾಗುತ್ತದೆ. ಯಾವ ರೀತಿಯಿಂದ ಮಾಡಬೇಕು ಎನ್ನುವುದನ್ನು ಸೂಕ್ತವಾಗಿ ವಿಚಾರ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

MURDER OF A CONSTABLE AT RABAKAVI

533. **Sri B. M. Bangi** (Jamkhandi).—Will the Chief Minister be pleased to state.—

(*a*) the number of arrests made in connection with the murder by burning alive of a PC in front of the Police Outpost at Rabkavi, Jamkhadi Taluk, Bijapur District on 14—12—1973.

(*b*) whether investigation is completed and charge-sheet filed, if not the reasons for the same.

(*c*) whether two of the persons arrested in this murder case were released from the sub jail, Jamkhandi,

(*d*) the names of the 2 persons released from the sub jail Jamkhandi and the reasons thereof, when more persons are being hauled up for investigation and about whom charge sheet has not been filed as yet;

(*e*) the financial status of those two persons released and of those still held up in the sub-jail. Jamkhandi in connection with the murder of the constable ?

Sri D. Devaraj Urs (Chief Minister).—

(*a*) 37 persons have been arrested so far.

(*b*) Charge sheet in the case has not yet been filed as some more accused are to be arrested.

(*c*) Yes. They were released u/s 169 Cr. P.C.

(*d*) During the course of investigation it was found that the following two persons had not participated in the crime and as such they were released u/s 169 Cr. P.C.

1. L. S. Daga and
2. J. R. Chindak.

(*e*) Sri L. S. Daga is well-to-do J. R. Chindok is not rich Some of those who are in the jail are also well-to-do.

ಶ್ರೀ ಪಿ. ಎಂ. ಬಾಂಗಿ.—ಯಾವ ಅಪರಾಧಿಗಳು ಇನ್ನೂ ಸಿಕ್ಕಿಲ್ಲ ಅವರ ಗ್ರಹಿಸರುಗಳನ್ನು ತೋರಿಸಿ ಚಾರ್ಜ್ ಷೀಟ್ ಕಳುಹಿಸುವುದಕ್ಕೆ ಏನು ಅಡ್ಡಿ ಇತ್ತು ಎಂಬುದನ್ನು ಹೇಳುತ್ತಾರೆಯೇ ?

† ಶ್ರೀ ಡಿ. ದೇವರಾಜ ಅರಸ್.—ತಪ್ಪಿಸಿಕೊಂಡಿರುವವರೂ ಸಿಕ್ಕಿದರೆ ಚಾರ್ಜ್ ಷೀಟ್ ಕಳುಹಿಸೋಣ ಎಂದು ಇದುವರೆಗೂ ಹುಡುಕುವ ಪ್ರಯತ್ನದಲ್ಲಿದ್ದರು, ಇನ್ನೂ ಸಿಕ್ಕಿಲ್ಲ. ಚಾರ್ಜ್‌ಷೀಟ್ ಹಾಕುವುದರಲ್ಲಿದ್ದಾರೆ,

ಶ್ರೀ ಪಿ. ಎಂ. ಬಾಂಗಿ.—ಇಬ್ಬರು ಆರೋಪಿಗಳನ್ನು ಏನೂ ಅಪರಾಧವಿಲ್ಲದೆ ಯಾವುದೂ ಪುರಾವೆ ಇಲ್ಲದೆ ಜುಡಿಷಿಯಲ್ ಕಸ್ಟಡಿಯೊಳಗೆ ಇಡುವುದಕ್ಕೆ ಕಾರಣವೇನು ?

ಶ್ರೀ ಡಿ. ದೇವರಾಜ ಅರಸ್.—ಮೊದಲು ಅರೆಸ್ಟ್ ಮಾಡಿದಾಗ ಅವರದೂ ತಪ್ಪು ಇರಬಹುದು ಎನ್ನುವ ಅನುಮಾನದ ಮೇಲೆ ಜುಡಿಷಿಯಲ್ ಕಸ್ಟಡಿಗೆ ಕಳುಹಿಸಿದರು. ನಂತರ ಅವರು ಆಸ್ಪತ್ರೆಯಲ್ಲಿರಲಿಲ್ಲ, ಅದಕ್ಕೆ ಸಂಬಂಧಪಟ್ಟಿಲ್ಲ ಎಂದು ಗೊತ್ತಾದ ಮೇಲೆ ಅವರನ್ನು ಬಿಟ್ಟಿದ್ದಾರೆ.

ಶ್ರೀ ಪಿ. ಎಂ. ಬಾಂಗಿ.—ಇನ್ನೂ ಇನ್‌ವೆಸ್ಟಿಗೇಷನ್ ನಡೆದಿದೆ. ತಪ್ಪಿಸಿಕೊಂಡಿರುವ ಆರೋಪಿಗಳನ್ನು ಹಿಡಿಯಲಿಕ್ಕೆ ಹತ್ತಿದ್ದಾರೆ. ನಾಲ್ಕು ತಿಂಗಳಾದರೂ ಚಾರ್ಜ್‌ಷೀಟ್ ಹಾಕಿಲ್ಲ. ಇಂಥ ಪರಿಸ್ಥಿತಿಯೊಳಗೆ ಅವರ ಮೇಲೆ ಪುರಾವೆ ಇಲ್ಲ ಎಂದು ಹೇಗೆ ಬಿಡುವುದಕ್ಕೆ ಬರುತ್ತದೆ.

ಶ್ರೀ. ಡಿ. ದೇವರಾಜ ಅರಸ್.—ತನಿಖೆ ಮಾಡಿದ್ದರಲ್ಲಿ ಅವರು ಏನೂ ತಪ್ಪೀರು ಮಾಡಿಲ್ಲವೆಂದು ತಿಳಿದು ಬಂದುದರಿಂದ ಬಿಟ್ಟಿದ್ದಾರೆ.

I. T. ROADS IN SHIMOGA DISTRICT

540. Sri Abdul Kuddus Anwar (Bhadravathi).—

Will the Chief Minister be pleased to state.—

(*a*) the number of I. T. Road completed during 1971-72 in Shimoga District ;

(*b*) when was the I. T. Road from Umblebyle Road *via* Military Camp to Nanjapura was taken up and the amount spent on it so far ;

(*c*) whether the same has been completed; if not, the reasons for the same ;

(*d*) whether it is a fact that Reserve Police are obstructing the formation of that road ;